ಅವಕಾಶಗಳ ಸೃಷ್ಟಿ... ಇವೆಲ್ಲವುಗಳಲ್ಲೂ ಯುವಮನವಿದೆ. ಈ ಯುವಮಂತ್ರವನ್ನೇ ಮಾರುಕಟ್ಟೆ ಅಳವಡಿಸಿಕೊಂಡಿದೆ. ಅದು ಒಡ್ಡುವ ಪ್ರಲೋಭನೆಗೆ ಯುವಕರದ್ದು ಸಹಜ ಪ್ರಚೋದನೆ, ಸ್ಪಂದನ.

ಕನ್ನಡ ಸಿನಿಮಾ ನಿರ್ದೇಶಕ ಯೋಗರಾಜ ಭಟ್ಟರು 'ಮುಂಗಾರು ಮಳೆ' ಸಿನಿಮಾ ಮಾಡಿದ್ದಾಗ ಅದನ್ನು ನೋಡಿ ಕೊಂಡಾಡಿದ್ದ ಪ್ರೇಕ್ಷಕರಲ್ಲಿ ಎಷ್ಟೋ ಜನ ಈಗ ಸಿನಿಮಾ ನೋಡುವುದನ್ನೇ ಬಿಟ್ಟಿದ್ದಾರೆ. ಹಾಗೆಂದು ಅವರೇ ಒಮ್ಮೆ ಹೇಳಿಕೊಂಡಿದ್ದರು. ಅದಕ್ಕೇ ಈಗ ಅವರಿಗೆ ಹೊಸ ತಲೆಮಾರನ್ನು ನೋಡಿಸುವ ಸಿನಿಮಾ ಮಾಡಬೇಕಾದದ್ದು ಮುಖ್ಯವಾಗಿಬಿಟ್ಟಿದೆ. ಅದಕ್ಕಾಗೇ ವರ್ಷಗಳಿಂದ ಒಂಥರಾ ಹೆಣಗಾಟ. ಅದು ಎಲ್ಲರ ಪಾಲಿನ ಸತ್ಯ.

### 'ಹೀಗೂ ಉಂಟು' ತಲೆಮಾರುಗಳು...

1982ರಿಂದ ಈಚೆಗೆ ಜನಿಸಿದವರೆಲ್ಲರನ್ನು 'ವೈ' ಜನರೇಷನ್ ಎನ್ನುತ್ತಾರೆ. ಹಾಗಿದ್ದರೆ 'ಎಕ್ಸ್' ಅಥವಾ 'ಝಡ್' ಜನರೇಷನ್ ಎಂದರೆ ಯಾರೆಂಬ ಪ್ರಶ್ನೆ ಉದ್ಭವವಾಗುತ್ತದೆ. 20ನೇ ಶತಮಾನದ ಮೊದಲ ಭಾಗದಲ್ಲಿ ಹುಟ್ಟಿದವರಿಂದ ಹಿಡಿದು, ಈ ಶತಮಾನದಲ್ಲಿ ಹುಟ್ಟಿದವರವರೆಗೆ ವಿವಿಧ ಪೀಳಿಗೆಗಳೆಂದು ವಿಂಗಡಿಸಲಾಗಿದೆ.

1901ರಿಂದ 1924ರವರೆಗೆ ಹುಟ್ಟಿದವರು 'ಗ್ರೇಟೆಸ್ಟ್ ಜನರೇಷನ್'. ಇವರೆಲ್ಲಾ ಎರಡನೇ ಮಹಾಯುದ್ಧದ ಕಾಲದಲ್ಲಿ ಯುವಕರಾಗಿದ್ದವರು. 1925ರಿಂದ 1945ರವರೆಗೆ ಹುಟ್ಟಿದವರು 'ಸೈಲೆಂಟ್ ಜನರೇಷನ್'ಗೆ ಸೇರಿದವರು. ತಮ್ಮಷ್ಟಕ್ಕೆ ತಾವು ಶಾಂತಚಿತ್ತದಿಂದ ಇದ್ದು, ತುತ್ತಿನಚೀಲ ತುಂಬಿಸಿಕೊಂಡ ಪೀಳಿಗೆ ಇದೆನ್ನುವುದು ವ್ಯಾಖ್ಯೆ. 1946ರಿಂದ 1964ರವರೆಗೆ ಜನಿಸಿದ ಜನರನ್ನು 'ಬೇಬಿ ಬೂಮರ್ಸ್' ಅರ್ಥಾತ್ ಹೆಚ್ಚು ಮಕ್ಕಳನ್ನು ಹೆತ್ತು–ಹೊತ್ತವರು ಎಂದು ವ್ಯಂಗ್ಯ ಬೆರೆಸಿದ ದಾಟಿಯಲ್ಲಿ ಕರೆಯುತ್ತಾರೆ. 1965ರಿಂದ 1982ರವರೆಗೆ ಹುಟ್ಟಿದವರೇ 'ಎಕ್ಸ್' ಜನರೇಷನ್‌ನವರು. 1995ರ ನಂತರ ಹುಟ್ಟಿದವರನ್ನು 'ಝಡ್' ಜನರೇಷನ್‌ಗೆ ಸೇರಿಸಿದ್ದಾರೆ.

1991ರಲ್ಲಿ ಕೆನಡಾದ ಬರಹಗಾರ ಡೌಗ್ಲಾಸ್ ಕೂಪ್‌ಲ್ಯಾಂಡ್ 'ಜನರೇಷನ್ ಎಕ್ಸ್: ಟೇಲ್ಸ್ ಫಾರ್ ಎನ್ ಆಕ್ಸಲರೇಟೆಡ್ ಕಲ್ಚರ್' ಎಂಬ ಕೃತಿ ಪ್ರಕಟಿಸಿದ




